ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.715/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಶರಣಪ್ಪ** | | |
| **ತಂದೆಃಹೆಸರು** | **ತಿಪ್ಪಣ್ಣ** | **ಪಿಡಬ್ಲೂ:** | **12** |
| **ವಯಸ್ಸು** | **64 ವರ್ಷ** | **ಸಿಡಬ್ಲೂ:** | **4** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಕುಷ್ಟಗಿ** | | |

**ದಿನಾಂಕ 18-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ 3 ನೇ ಆರೋಪಿಯು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1 ನನ್ನ ತಂಗಿ ಮಗಳು. ಚಾಸಾ-3 ನನ್ನ ತಂಗಿ. ಚಾಸಾ-2 ನನ್ನ ತಂಗಿಯ ಗಂಡ. ಚಾಸಾ-4 ರಿಂದ 6 ರವರು ಚಾಸಾ-3 ರವರ ಮಕ್ಕಳು. ಚಾಸಾ-7 ರಿಂದ 11 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. 1 ನೇ ಆರೋಪಿ ಚಾಸಾ-1 ರವರ ಗಂಡ. ಉಳಿದ ಆರೋಪಿತರು 1 ನೇ ಆರೋಪಿಯ ಸಂಬಂಧಿಕರು.

ದಿ.15-02-2019 ರಂದು ಮಾನ್ವಿಯ ಧ್ಯಾನಮಂದಿರ ಕಲ್ಯಾಣ ಮಂಟಪದಲ್ಲಿ 1 ನೇ ಆರೋಪಿಯೊಂದಿಗೆ ಚಾಸ-1 ರವರ ಮದುವೆ ಆಗಿತ್ತು. ಮದುವೆಯಾದ 1 ತಿಂಗಳವರೆಗೆ ಚೆನ್ನಾಗಿದ್ದರು. ನಂತರ ಆರೋಪಿತರು ನಿನಗೆ ಕೆಲಸ ಮಾಡಲು ಬರುವುದಿಲ್ಲ, ಅಡಿಗೆ ಮಾಡಲು ಬರುವುದಿಲ್ಲ, ಬೆಳಿಗ್ಗೆ ಎದ್ದು ನಿನ್ನ ಮುಖ ನೋಡಬಾರದು, ಕೆಟ್ಟ ಧರಿದ್ರ ಇದ್ದೀ, ನಿನಗೆ

ಮಕ್ಕಳಾಗುವುದಿಲ್ಲ, ನಿನಗೆ ವರದಕ್ಷಿಣೆ ತೆಗೆದುಕೊಂಡು ಬಾ ಎಂದರೆ ತಂದಿಲ್ಲ, ನಾವು ಕೇಳಿದ್ದು 13 ತೊಲೆ ಬಂಗಾರ, ನೀವು ಬರೀ 10 ತೊಲೆ ಬಂಗಾರ ಕೊಟ್ಟಿದ್ದೀರಿ, 2 ಕೆ.ಜಿ. ಬೆಳ್ಳಿ ಕೇಳಿದ್ದೆವು, 1 ಕಿಲೋ ಕೊಟ್ಟಿದ್ದೀರಿ, ನಾವು ರೂ.5 ಲಕ್ಷ ಕೇಳಿದರೆ, ನೀವು ರೂ.2 ಲಕ್ಷ ಕೊಟ್ಟಿದ್ದೀರಿ ಎಂದು ಆರೋಪಿತರು ಚಾಸಾ-1 ರವರಿಗೆ ಕಿರುಕುಳ ಕೊಡುತ್ತಿದ್ದರು. ಈ ಕಾರಣ ಇಟ್ಟುಕೊಂಡು ಚಾಸಾ-1 ರವರಿಗೆ ಕಿರುಕುಳ ಕೊಡುತ್ತಿದ್ದ ವಿಚಾರವನ್ನು ಆಕೆ ತವರು ಮನೆಗೆ ಬಂದಾಗ ನಮಗೆ ತಿಳಿಸಿದ್ದಳು, ನಾವು ಹೊಸ ಮನೆತನ ಸಂಬಾಳಿಸಿಕೊಂಡು ಹೋಗು ಎಂದು ಹೇಳಿದ್ದೆವು.

2020 ರಲ್ಲಿ ಒಂದು ದಿನ ನಾನು, ಚಾಸಾ-2 ರವರ ಮನೆಯಲ್ಲಿ, ಚಾಸಾ-2 & 3 ರವರೊಂದಿಗೆ ಇದ್ದಾಗ, ಚಾಸಾ-5 & ಅವರ ಸ್ನೇಹಿತರು ಮನೆಯ ಹೊರಗಡೆ ರಾ.8 ಗಂಟೆಯ ಸುಮಾರಿಗೆ ಮಾತನಾಡುತ್ತಾ ಕುಳಿತಿದ್ದರು. ಆ ಸಮಯಕ್ಕೆ ಚಾಸಾ-1 ರವರು, ಚಾಸಾ-2 ರವರ ಮನೆಯಲ್ಲಿದ್ದರು. ಆಗ 1 ರಿಂದ 3 ನೇ ಆರೋಪಿತರು ಚಾಸಾ-2 ರವರ ಮನೆಗೆ ಏಕಾಏಕಿ ಬಂದು, 1 ನೇ ಆರೋಪಿ ಚಾಸಾ-1 ರವರ ತಲೆ ಕೂದಲು ಹಿಡಿದು ಮನೆಯ ಹೊರಗಡೆ ಎಳೆದುಕೊಂಡು ಬಂದನು. ಆಗ ಚಾಸಾ-1 ಚೀರಾಡುತ್ತಿದ್ದಳು, ಅದನ್ನು ಕೇಳಿ ನಾವು ಓಡಿ ಬಂದೆವು. ಆಗ ಆರೋಪಿತರು ಹಣ ತೆಗೆದುಕೊಂಡು ಬಾ ಎಂದರೆ ಇಲ್ಲೇ ಇದ್ದೀಯಾ ಸೂಳೆ ಎಂದು ಬೈದು, ಹೊಡಿ ಬಡೆ ಮಾಡಿದರು. ಅಲ್ಲಿದ್ದಂತಹ ನಾವೆಲ್ಲರೂ ಸೇರಿ ಆಕೆಯನ್ನು ಬಿಡಿಸಿಕೊಂಡೆವು. ಆ ಕಾಲಕ್ಕೆ ನಾವು ಆರೋಪಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ದೂರು ಕೊಟ್ಟೆವು.

ನಂತರ ಪೋಲೀಸರು ನನ್ನ ಹೇಳಿಕೆ ಪಡೆದುಕೊಂಡರು.

ಮದುವೆಗಿಂತ ಮೊದಲು ಆರೋಪಿತರು 13 ತೊಲೆ ಬಂಗಾರ, 2 ಕೆ. ಜಿ. ಬೆಳ್ಳಿ & ರೂ.5 ಲಕ್ಷ ಬೇಡಿಕೆ ಕೊಟ್ಟಿದ್ದರು, ಆಗ ನಾವು ಆಗುವುದಿಲ್ಲ ಎಂದು ಸುಮ್ಮನಾಗಿದ್ದೆವು. ನಂತರ ಆರೋಪಿತರು ಪುನಃ ಬಂದರು, ಆಗ ನಾವು 10 ತೊಲೆ ಬಂಗಾರ, 1 ಕೆ.ಜಿ. ಬೆಳ್ಳಿ & ರೂ.2 ಲಕ್ಷ ಹಣವನ್ನು ಕೊಟ್ಟಿದ್ದೆವು. ಆರೋಪಿತರಿಗೆ ಸದರಿಯವುಗಳನ್ನು ಕೊಡುವ ಕಾಲಕ್ಕೆ ನಾನು, ಚಾಸಾ-2 & 3 ರವರು ಇದ್ದೆವು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ</u>**

4 ನೇ ಆರೋಪಿ ಸಹ ಚಾಸಾ-1 ರವರಿಗೆ ಕಿರುಕುಳ ಕೊಡುತ್ತಿದ್ದಳು ಎಂದರೆ ಸರಿ. ದಿ.18-12-2019 ರಂದು ರಾ.8-30 ಕ್ಕೆ ಘಟನೆ ನಡೆದಿತ್ತು ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ನೀವು ಸರ್ಕಾರಿ ನೌಕರರು ಎಂದರೆ ಸರಿಯಲ್ಲ. ನನ್ನ ಸ್ವಗ್ರಾಮ ಕುಷ್ಟಗಿ. ನಾನು ಸಿಂಧನೂರಿನ ನನ್ನ ತಂಗಿಯ ಮನೆಗೆ ಯಾವ ಯಾವ ದಿನಾಂಕಗಳಂದು ಬಂದಿದ್ದಿರಿ ಎಂದು ಹೇಳಲು ಆಗುವುದಿಲ್ಲ.

2. ಆರೋಪಿತರ ಮನೆತನದ ಬಗ್ಗೆ ಯಾರೂ ನನಗೆ ಪರಿಚಯ ಮಾಡಿಕೊಟ್ಟಿಲ್ಲ. ಕನ್ಯಾ ನೋಡಲು ಬಂದಾಗ ನಾನು ಇರಲಿಲ್ಲ. ಕನ್ಯಾ ನೋಡಲು ಬಂದಾಗ ಹುಡುಗಿಯ ಕೈ ರೇಖೆಗಳು, ಕಾಲುಗಳನ್ನು ನೋಡಿ ಮದುವೆಗೆ ಒಪ್ಪಿಗೆ ಸೂಚಿಸುತ್ತಾರೆ ಎಂದರೆ ಸರಿ.

3. ಬಂಗಾರ & ಬೆಳ್ಳಿ ಖರೀದಿಸಿದಾಗ ರಶೀದಿ ಕೊಡುತ್ತಾರೆ ಎಂದರೆ ಸರಿ. ಬಂಗಾರ & ಬೆಳ್ಳಿ ಖರೀದಿ ಮಾಡಿದ ಬಗ್ಗೆ ರಶೀದಿಗಳು ಒಂದೆರಡು ಇರಬಹುದು. ಮದುವೆಯ ಕಾಲಕ್ಕೆ ಕೊಡುವ ಮನೆಬಳಕೆ ಸಾಮಾನುಗಳ ಮೇಲೆ ಹೆಸರುಗಳನ್ನು ಹಾಕಿಸಿಕೊಡುತ್ತಾರೆ ಎಂದರೆ ಸರಿ. ನಾವು ಕೊಟ್ಟ ಮನೆ ಬಳಕೆ ಸಾಮಾನುಗಳ ಮೇಲೆ ಹೆಸರು ಹಾಕಿಸಿರಲಿಲ್ಲ. ಪಾತ್ರೆ ಅಂಗಡಿಯಲ್ಲಿ ಇಂತಿಷ್ಟು ಸಾಮಾನುಗಳನ್ನು ತೆಗೆದುಕೊಂಡಿದ್ದಾರೆಂದು ರಶೀದಿ ಕೊಡುತ್ತಾರೆ ಎಂದರೆ ಸಾಕ್ಷಿಯು ಒಟ್ಟಿಗೆ ಖರೀದಿ ಮಾಡಿದರೆ ಕೊಡುತ್ತಾರೆ, ನಮಗೆ ಅನುಕೂಲ ಆದಾಗ ಸ್ವಲ್ಪ ಸ್ವಲ್ಪ ಸಾಮಾನು ಖರೀದಿ ಮಾಡಿದಾಗ ಕೊಡುವುದಿಲ್ಲ ಎನ್ನುತ್ತಾರೆ. ಆ ರೀತಿ ಯಾವ ಯಾವ ವರ್ಷದಲ್ಲಿ ಖರೀದಿ ಮಾಡಿದ್ದಿರಿ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎನ್ನುತ್ತಾರೆ.

4. ಚಾಸಾ-1 ರವರ ಮದುವೆಯಾದ 3 ತಿಂಗಳ ನಂತರ ಚಾಸಾ-3 ರವರ ಮನೆಗೆ ಹೋಗಿದ್ದೆ. ಮಾನ್ವಿಯಲ್ಲಿರುವ ಆರೋಪಿತರ ಮನೆಗೆ ನಾನು ಹೋಗಿಲ್ಲ. ಮಾನ್ವಿಗೆ ಹೋಗಿ ಚಾಸ-1 ರವರಿಗೆ ಕೊಡುತ್ತಿದ್ದ ಕಿರುಕುಳದ ಬಗ್ಗೆ ನಾನು ವಿಚಾರಿಸಿಲ್ಲ. ಚಾಸಾ-1 ರವರು ಕಿರುಕುಳದ ಬಗ್ಗೆ ಹೇಳಿದ ದಿನಾಂಕ, ವರ್ಷ ಹೇಳಲು ಆಗುವುದಿಲ್ಲ.

5. ಚಾಸಾ-3 ರವರ ಮನೆಯ ಸುತ್ತಮುತ್ತ ಬಹಳ ಮನೆಗಳಿವೆ ಎಂದರೆ ಸರಿ. ಅಲ್ಲಿ ಶ್ರೀಮಂತರ ಮನೆಗಳಿವೆ ಎಂದರೆ ಸರಿ. ಆದ್ದರಿಂದ ಅಲ್ಲಿ ಸಿಸಿ ಕ್ಯಾಮೆರಾಗಳು ಇರುತ್ತವೆ ಎಂದರೆ ನಾನು ಏಕೆ ನೋಡಲಿ ಎನ್ನುತ್ತಾರೆ. ಚಾಸಾ-3 ರವರದ್ದು 1 ಅಂತಸ್ತಿನ ಮನೆ. ಚಾಸಾ-2 ರವರು ನೆಲ ಮಹಡಿ & ಮೇಲ್ಮಹಡಿ ಎರಡನ್ನು ಬಳಸುತ್ತಾರೆ. ಆ ಮನೆಯಲ್ಲಿ ಒಟ್ಟು 3 ರೂಂಗಳಿವೆ. ಮನೆಯ ಉದ್ದ ಅಗಲ ನಿಖರವಾಗಿ ನನಗೆ ಗೊತ್ತಿಲ್ಲ. ಸದರಿ ಮನೆಯ ಚೆಕ್ ಬಂದಿ ಹೇಳಲು ಆಗುವುದಿಲ್ಲ.

6. ಇದೇ ಮೊದಲು ನ್ಯಾಯಾಲಯದಲ್ಲಿ ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿ. ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದ ವಿಷಯವನ್ನು ಇದೇ ಮೊದಲು ಬಾರಿಗೆ ಹೇಳುತ್ತಿದ್ದೇನೆ, ಈ ಮುಂಚೆ ಯಾರಿಗೂ ಹೇಳಿಲ್ಲ ಎಂದರೆ ಸರಿ.

7. ಸದರಿ ಘಟನೆಯ ಬಗ್ಗೆ ನನ್ನ ತಂಗಿ ನನಗೆ ತಿಳಿಸಿದ್ದಳು. ಈ ಕೇಸಿನ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ.

8. ಚಾಸಾ-1 ರವರು ವಾಣಿಜ್ಯ ಪದವೀಧರೆ. 1ನೇ ಆರೋಪಿ ಮಾನ್ವಿಯಲ್ಲಿ ಹೂ ಮಾರಾಟ ಮಾಡಿ, ತಮ್ಮ ಜೀವನ ನಡೆಸುತ್ತಾರೆ ಎಂದರೆ ಸರಿ. ಚಾಸಾ-1 ರವರು ಪದವೀಧರೆ ಇದ್ದು, ಆರೋಪಿ ಹೂ ವ್ಯಾಪಾರ ಮಾಡುತ್ತಿರುವುದರಿಂದ, ಈ ರೀತಿ ಸುಳ್ಳು ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

9. ನೀವು ಹೇಳಿದಂತೆ ಆರೋಪಿತರು ವರದಕ್ಷಿಣೆ ಕೇಳಿಲ್ಲ, ನೀವು ವರದಕ್ಷಿಣೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ವರದಕ್ಷಿಣೆ ಕಿರುಕುಳ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕೈಗಳಿಂದ ಹೊಡೆಬಡೆ ಮಾಡಿಲ್ಲ, ಕೂದಲು ಹಿಡಿದು ಎಳೆದಾಡಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ಕಿರುಕುಳ ಕೊಡುವ ಉದ್ದೇಶದಿಂದ ಚಾಸಾ-1 ರವರು ಈ ರೀತಿ ಸುಳ್ಳು ಪ್ರಕರಣ ದಾಖಲಿಸಿದ್ದು, ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**